# <u>ಹರಿಯ ನೆನೆಯದ ನರಜನ್ಮವೇಕೆ</u>

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 595.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 103.
3. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchha Rayaru, page No. 08.
4. **Note:** Lyrics given without highlights are as per Ref. 1. Lyrics in Ref. 2 are slightly different and are not considered here. The wordings in Ref. 3 are also slightly different and have 5 stanzas. They are given separately in green highlights.
5. **Note:** Singer has followed lyrics as in Ref. 1. Many singers have followed these lyrics.

ರಾಗ: ಪೂರ್ವಿ ತಾಳ: ಅಟ

ಹರಿಯ ನೆನೆಯದ ನರ ಜನ್ಮವೇಕೆ, ನರ-
ಹರಿಯ ಕೊಂಡಾಡದ ನಾಲಿಗೆಯೇಕೆ ॥ ಪ ॥

ವೇದವನೋದದ ವಿಪ್ರ ತಾನೇಕೆ
ಕಾದಲರಿಯದ ಕ್ಷತ್ರಿಯನೇಕೆ
ಕ್ರೋಧವ ಬಿಡದ ಸನ್ಯಾಸಿ ತಾನೇಕೆ
ಆದರವಿಲ್ಲದ ಅಮೃತಾನ್ನವೇಕೆ ॥ 1 ॥

ಸತ್ಯ ಶೌಚವಿಲ್ಲದಾಚಾರವೇಕೆ
ನಿತ್ಯ ನೇಮವಿಲ್ಲದ ಜಪ ತಪವೇಕೆ
ಭಕ್ತಿಲಿ ಮಾಡದ ಹರಿ ಪೂಜೆಯೇಕೆ
ಉತ್ತಮರಿಲ್ಲದ ಸಭೆಯು ತಾನೇಕೆ ॥ 2 ॥

ಮಾತಾ ಪಿತರ ಪೊರೆಯದ ಮಕ್ಕಳೇಕೆ

ಮಾತು ಕೇಳದ ಸೊಸೆ ಗೊಡವೆ ತಾನೇಕೆ
ನೀತಿನೇರಿಲ್ಲದ ಕೂಟ ತಾನೇಕೆ ಅ-
ನಾಥನಾದ ಮೇಲೆ ಕೋಪವದೇಕೆ || 3 ||

ಅಳಿದು ಅಳಿದು ಹೋಗುವ ಮಕ್ಕಳೇಕೆ
ತಿಳಿದು ಬುದ್ಧಿಯ ಹೇಳದ ಗುರುವೇಕೆ
ನಳಿನನಾಭ ಶ್ರೀ ಪುರಂದರ ವಿಠಲನ
ಚೆಲುವ ಮೂರುತಿಯ ನೋಡದ ಕಂಗಳೇಕೆ || 4 ||

**Note:** Below mentioned lyrics in green highlights are as per Ref. 3 above.

ರಾಗ: ರೇಗುಪ್ತಿ ತಾಳ: ತ್ರಿವಿಡೆ

ಹರಿಯ ನೆನೆಯದ ನರ ಜನ್ಮವೇಕೆ, ಶ್ರೀ
ಹರಿಯ ಕೊಂಡಾಡದ ನಾಲಿಗೆಯಿನ್ನೇಕೆ || ಪ ||

ಸತ್ಯ ಶೌಚವಿಲ್ಲದ ಆಚಾರವೇಕೆ
ಚಿತ್ತ ಶುದ್ಧಿಯಿಲ್ಲದ ಜ್ಞಾನವಿನ್ನೇಕೆ
ಭಕ್ತಿ ಭಾವವಿಲ್ಲದ ದೇವ ಪೂಜೆ ಏಕೆ
ಉತ್ತಮರಿಲ್ಲದ ಸಭೆಯು ಇನ್ನೇಕೆ || ೧ ||

ಕ್ರೋಧವ ಬಿಡದಿಹ ಸಂನ್ಯಾಸವೇಕೆ
ಆದರವಿಲ್ಲದ ಅಮೃತಾನ್ನವೇಕೆ
ವೇದ-ಶಾಸ್ತ್ರವಿಲ್ಲದ ವಿಪ್ರತನವೇಕೆ
ಕಾದಲಂಜುವನಿಗೆ ಕ್ಷಾತ್ರ ತಾನೇಕೆ || ೨ ||

ಸಾಲದಟ್ಟುಳಿ ಎಂಬ ಸಂಸಾರವೇಕೆ
ಬಾಲಕರಿಲ್ಲದ ಭಾಗ್ಯವಿನ್ನೇಕೆ
ವೇಳೆಗೆ ಒದಗದ ನೆಂಟರಿನ್ನೇಕೆ, ಅನು-
ಕೂಲವಿಲ್ಲದ ಸತಿಯ ಸಂಗವೇಕೆ || ೩ ||

ಮಾತ ಪಿತರ ತೊರೆದ ಮಕ್ಕಳಿನ್ನೇಕೆ

ಮಾತು ಕೇಳದ ಮಗನ ಗೊಡವೆ ಇನ್ನೇಕೆ
ನೀತಿ ತಪ್ಪಿದ ದೊರೆಯ ಸೇವೆ ಇನ್ನೇಕೆ
ಅನಾಥನಾಗಿರುವಗೆ ಕೋಪವಿನ್ನೇಕೆ || ೪ ||

ಅಳಿದುಳಿದಿಹ ಮಕ್ಕಳುಗಳಿನ್ನೇಕೆ
ತಿಳಿದು ಬುದ್ಧಿಯ ಹೇಳದ ಗುರುತನವೇಕೆ
ನಳಿನನಾಭ ಶ್ರೀ ಪುರಂದರ ವಿಠಲನ
ಚೆಲುವ ಮೂರುತಿಯ ಕಾಣದ ಕಂಗಳೇಕೆ || ೫ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಬದುಕಿನಲ್ಲಿ ನಾವು ಮಾಡುವ ಪ್ರತಿಯೊಂದು ಕಾರ್ಯವೂ ಒಂದು ಖಚಿತ ಉದ್ದೇಶದ ಸಫಲತೆಗಾಗಿ ಮೀಸಲಾಗಿದೆ ಎಂಬ ಅರಿವು ಮೂಡಬೇಕಾದದ್ದು ಅತ್ಯಗತ್ಯ. ತನ್ನ ಪಾಲಿನ ಕಾರ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸಲು ಸಾಧ್ಯವಾಗದಿದ್ದರೆ ಅದರ ಬಗೆಗೆ ಸುಮ್ಮನೆ ಮಾತನಾಡಿ ಪ್ರಯೋಜನವಿಲ್ಲ ಎಂಬ ಭಾ ಈ ಕೀರ್ತನೆಯದು.

**ಶೌಚ** – ಪರಿಶುದ್ಧತೆ, ನೈರ್ಮಲ್ಯ.

**ಅಳಿದು ಅಳಿದು ಪೋಪ ಮಕ್ಕಳು** – ತಾಯ್ತಂದೆಗಳನ್ನು ಸಂಕಟಕ್ಕೆ ಸಿಲುಕಿಸಿ, ತಾವೂ ಹಾಳಾಗುವ ಮಕ್ಕಳು.

**ಅಟ್ಟುಳಿ** = ಪೀಡೆ

**Classification:** Keerthane
**Ankita:** sri purandara vittala
**Location:** NA
**Category:** Loka Neeti, Jeevana Sutra
**Sub-Category:** Krishna, nara, janma, nalige, veda, brahmana, sittu, amruta, anna, satya, japa, tapa, puje, sabhe, tayi, tande, makkalu, buddi, kannu, Narasimha,
**Pravachana:** NA
**Explanation:** NA